Who's Afraid of Human Nature?

Steven Pinker and the Grammar of Mind

## ದಿ ಸ್ಟಫ್ ಆಫ್ ಥಾಟ್: ಲ್ಯಾಂಗ್ವೇಜ್ ಆಸ್  ಎ ವಿಂಡೋ ಇನ್‌ಟು ಹ್ಯೂಮನ್ ನೇಚರ್:

## ಸ್ಟೀವನ್ ಪಿಂಕರ್

## ಪೆಂಗ್ವಿನ್ ಬುಕ್ಸ್ (2008), xxi+499 ಪುಟಗಳು

ಇಂದು ಪ್ರಸಾದ್

***

ನಾವು ಪದಗಳನ್ನು ಬಳಸುವ ರೀತಿಯಲ್ಲಿ ಕಾಲ ಮತ್ತು ಅವಕಾಶದ ಒಂದು ಸಿದ್ಧಾಂತವಿದೆ. ಹಾಗೆಯೇ ದ್ರವ್ಯದ ಒಂದು ಸಿದ್ಧಾಂತವೂ ಮತ್ತು ಕಾರಣತ್ವದ ಒಂದು ಸಿದ್ಧಾಂತವೂ ಇದೆ... ಈ ಪರಿಕಲ್ಪನೆಗಳು ಭಾಷೆಯಿಂದ ಭಾಷೆಗೆ ಅವುಗಳ ವಿವರಗಳಲ್ಲಿ ಬದಲಾಗುತ್ತವೆ, ಆದರೆ ಅವುಗಳ ಒಟ್ಟಾರೆ ತರ್ಕ ಒಂದೇ ಆಗಿರುತ್ತದೆ... ಇವೆಲ್ಲ ವಿಚಾರಗಳು ಭಾಷೆಯಲ್ಲಿ ಹೆಣೆಯಲ್ಪಟ್ಟಿದ್ದರೂ ಅವುಗಳ ಬೇರುಗಳು ಭಾಷೆಗಿಂತಲೂ ಆಳವಾಗಿರುತ್ತವೆ. ನಾವು ಯಾವ ರೀತಿಯಲ್ಲಿ ನಮ್ಮ ಸುತ್ತಲಿನ ಪರಿಸರವನ್ನು ಗ್ರಹಿಸುತ್ತೇವೆ, ನಮ್ಮ ಸಹಚರಿಗಳಿಗೆ ನಾವು ಯಾವ ರೀತಿಯಲ್ಲಿ ಮನ್ನಣೆ ಕೊಡುತ್ತೇವೆ, ಅವರ ಮೇಲೆ ಯಾವ ರೀತಿಯಲ್ಲಿ ಆಪಾದನೆಗಳನ್ನು ಹೊರಿಸುತ್ತೇವೆ, ಪರಸ್ಪರ ಸಂಬಂಧಗಳಲ್ಲಿ ನಮ್ಮ ಮಾತುಕತೆಗಳು ಹೇಗಿರುತ್ತವೆ ಎಂಬುದಕ್ಕೆ ಅವು ಮೂಲ ನಿಯಮಗಳನ್ನು ರೂಪಿಸುತ್ತವೆ. ನಮ್ಮ ಮಾತುಗಳು, ನಮ್ಮ ಸಂಭಾಷಣೆಯ ರೀತಿ,  ನಾವು ಹಾರಿಸುವ ನಗೆ ಚಟಾಕಿಗಳು, ನಾವು ಹಾಕುವ ಶಾಪಗಳು, ನಮ್ಮ ಕಾನೂನು ವಿವಾದಗಳು, ನಮ್ಮ ಮಕ್ಕಳಿಗೆ ನಾವಿಡುವ ಹೆಸರುಗಳು ಇವನ್ನೆಲ್ಲ ಬಹಳ ಸೂಕ್ಷ್ಮವಾಗಿ ಗಮನಿಸಿದರೆ ಅವು ನಾವು ಯಾರು ಎಂಬುದರ ಒಳನೋಟವನ್ನು  ಕೊಡುತ್ತವೆ.

*ಸ್ಟೀವನ್ ಪಿಂಕರ್, ದಿ ಸ್ಟಫ್ ಆಫ್ ಥಾಟ್: ಲ್ಯಾಂಗ್ವೇಜ್ ಆಸ್ ಎ ವಿಂಡೋ ಇನ್ ಟು ಹ್ಯೂಮನ್ ನೇಚರ್, (ಸ್ಟೀವನ್ ಪಿಂಕರ್, ಚಿಂತನೆಯ ವಿಷಯ: ಮಾನವ ಸ್ವಭಾವದ ಕಿಟಕಿಯಾಗಿ ಭಾಷೆ) p.vii*

'ದಿ ಸ್ಟಫ್ ಆಫ್ ಥಾಟ್' ಇದು ಭಾಷಾವಿಜ್ಞಾನಿಗಳು ಹೇಳುವ ಶಬ್ದಾರ್ಥ ಮತ್ತು ಪ್ರಾಯೋಗಿಕತೆ ಬಗೆಗೆ ಇರುವ ಒಂದು ಪುಸ್ತಕವಾಗಿದೆ ಎನ್ನುತ್ತಾನೆ ಪಿಂಕರ್. ಆದರೆ, ಭಾಷೆ ಮತ್ತು ಶಬ್ದಾರ್ಥಶಾಸ್ತ್ರ ದ ಬಗೆಗೆ ಆತನಿಗಿರುವ ದೃಷ್ಟಿಕೋನವು ಭಾಷಾವಿಜ್ಞಾನಿಗಳಿಗೆ ಇರುವಂತಹದಲ್ಲ. ಒಬ್ಬ ಸಂಜ್ಞಾನಶಾಸ್ತ್ರಜ್ಞನಾಗಿ ಮೊದಲಿಗೆ ಮಾನವರ ಮನಸ್ಸಿಗೆ ಪದ ಮತ್ತು ಅರ್ಥವನ್ನು ಒಟ್ಟಾಗಿ ಬಂಧಿಸಿ ಕೊಡುವ ಕೊಂಡಿಯತ್ತ ಪಿಂಕರ್‌ನ ಗಮನವಿದೆ. ಪಿಂಕರ್ ಮುಂದಿಡುವ ವಿಷಯವು ಪರಿಕಲ್ಪನಾ "ಮೂಲಸಂರಚನೆ" ಯಾಗಿದ್ದು ಅದು ಮಾನವರ ಮನಸ್ಸಿಗೆ ಜನ್ಮಜಾತವಾಗಿದೆ ಎಂದು ಅವನು ನಂಬುತ್ತಾನೆ. ಜನ್ಮಜಾತವಾದ ಈ ಜ್ಞಾನದ ರಚನೆಗಳು ಮಾನವರಲ್ಲಿ ಭಾಷೆಯನ್ನು ಸಹಜವಾಗಿ ತನ್ನಷ್ಟಕ್ಕೆ ತಾನು ಸಾಧ್ಯವಾಗಿಸುತ್ತದೆ ಮತ್ತು ಪ್ರತಿಯಾಗಿ, ಭಾಷೆಯ ಅಧ್ಯಯನದ ಮೂಲಕ ಅದನ್ನು ಬಿಡಿಸಿ ನೋಡಬಹುದಾಗಿದೆ.

'ದಿ ಲ್ಯಾಂಗ್ವೇಜ್ ಇನ್‌ಸ್ಟಿಂಕ್ಟ್' (1994) ಎಂಬ ತನ್ನ ಪುಸ್ತಕದಲ್ಲಿ ಪಿಂಕರ್ ಸ್ವತಃ ತನ್ನ ಆಸಕ್ತಿಯ ವಿಷಯವು ಭಾಷೆ ಮಾತ್ರ ಅಲ್ಲ, ಬದಲಿಗೆ ಭಾಷೆ ಮತ್ತು ಮನಸ್ಸಿನ ನಡುವಿನ ಸಂಬಂಧ ಎಂದು ಹೇಳುತ್ತಾನೆ. 'ದಿ ಸ್ಟಫ್ ಆಫ್ ಥಾಟ್', ಆತ ಹೇಳುವಂತೆ, ಅದು ಮೂರು ಪುಸ್ತಕಗಳ ಸಂಯೋಜಿತ ಸರಣಿಯಲ್ಲಿ ಮೂರನೆಯದು. 'ದಿ ಲ್ಯಾಂಗ್ವೇಜ್ ಇನ್‌ಸ್ಟಿಂಕ್ಟ್' ಈ ವಿಷಯದ ಮೇಲಿನ ಆತನ ಮೊದಲನೆಯ ಪುಸ್ತಕವಾಗಿದ್ದು, ಅದನ್ನು ಆತ "ಭಾಷಾ ಸಾಮರ್ಥ್ಯದ ಒಂದು ಅವಲೋಕನ" ಎಂದು ವಿವರಿಸುತ್ತಾನೆ. ಮತ್ತು ಪಿಂಕರ್ ಹೇಳುವಂತೆ, ಭಾಷೆಯು ಧ್ವನಿ ಮತ್ತು ಅರ್ಥವನ್ನು ಒಟ್ಟುಗೂಡಿಸುವ ಒಂದು ಮಾರ್ಗವಾಗಿದ್ದು, ಉಳಿದೆರಡು ಪುಸ್ತಕಗಳು ಈ ಎರಡು ಕ್ಷೇತ್ರಗಳತ್ತ ಗಮನಹರಿಸುತ್ತವೆ. 'ವರ್ಡ್ಸ್ ಅಂಡ್ ರೂಲ್ಸ್' (1999) ಪುಸ್ತಕವು ಭಾಷೆಯ ಘಟಕಗಳ ಕುರಿತಾಗಿ ಇದೆ. ಭಾಷೆಯ ಘಟಕಗಳು ಹೇಗೆ ಸ್ಮರಣೆಯಲ್ಲಿ ಸಂಗ್ರಹಿಸಲ್ಪಡುತ್ತವೆ ಮತ್ತು ಭಾಷೆಗೆ ಅದರ ಅಭಿವ್ಯಕ್ತಿ ಶಕ್ತಿಯನ್ನು ನೀಡುವ ಅಪಾರ ಸಂಖ್ಯೆಯ ಸಂಯೋಜನೆಗಳಲ್ಲಿ ಅವು ಹೇಗೆ ಜೋಡಿಸಲ್ಪಡುತ್ತವೆ ಎಂಬುದನ್ನು ಇದು ವಿವರಿಸುತ್ತದೆ. 'ದಿ ಸ್ಟಫ್ ಆಫ್ ಥಾಟ್' ಶಬ್ದಾರ್ಥಶಾಸ್ತ್ರ ಮತ್ತು ಪ್ರಾಯೋಗಿಕತೆಯನ್ನು ಒಂದುಗೂಡಿಸುವ ಮತ್ತೊಂದು ಮಗ್ಗುಲಿನ ಕುರಿತಾಗಿ ಇದೆ ಎಂದು ಆತ ಹೇಳುತ್ತಾನೆ.

ಅದೇ ಸಮಯದಲ್ಲಿ 'ದಿ ಸ್ಟಫ್ ಆಫ್ ಥಾಟ್' ಮಾನವ ಸ್ವಭಾವದ ಸುತ್ತಲಿನ ಮೂರು ಪುಸ್ತಕಗಳ ಮತ್ತೊಂದು ಸಂಯೋಜಿತ ಸರಣಿಯಲ್ಲಿ ಬರುತ್ತದೆ ಎಂದು ಪಿಂಕರ್ ಹೇಳುತ್ತಾನೆ. 'ಹೌ ದಿ ಮೈಂಡ್ ವರ್ಕ್ಸ್' (1997), ಸಂಜ್ಞಾನಶಾಸ್ತ್ರ ಮತ್ತು ವಿಕಸನೀಯ ಮನೋವಿಜ್ಞಾನದ ಬೆಳಕಿನಲ್ಲಿ ಮನಸ್ಸನ್ನು ಒಮ್ಮೆ ಬಿಡಿಸಿ ನೋಡಿ ಮತ್ತೆ ಜೋಡಿಸಲು ಪ್ರಯತಿಸುತ್ತದೆ. 'ದಿ ಬ್ಲಾಂಕ್ ಸ್ಲೇಟ್' (2002) ಮಾನವ ಸ್ವಭಾವದ ಪರಿಕಲ್ಪನೆ ಮತ್ತು ಅದರ ನೈತಿಕ, ಭಾವನಾತ್ಮಕ ಮತ್ತು ರಾಜಕೀಯ ಬಣ್ಣಗಳನ್ನು ಪರಿಶೋಧಿಸುತ್ತದೆ. 'ದಿ ಸ್ಟಫ್ ಆಫ್ ಥಾಟ್' ಈ ವಿಷಯವನ್ನು ಇನ್ನೂ ಭಿನ್ನವಾದ ರೀತಿಯಲ್ಲಿ ಹಿಡಿದಿಡುತ್ತದೆ: ಜನರು ತಮ್ಮ ಆಲೋಚನೆಗಳು ಮತ್ತು ಭಾವನೆಗಳನ್ನು ಪದಗಳಲ್ಲಿ ಹಾಕುವ ರೀತಿಯಿಂದಾಗಿ ಅವರು ಹೇಳುತ್ತಿರುವುದೇನು ಎನ್ನುವುದನ್ನು ನಾವು ಮನನ ಮಾಡಿಕೊಳ್ಳಲು ಕಲಿಯುತ್ತೇವೆ.

ಸ್ಟೀವನ್ ಪಿಂಕರ್‌ನ ಮೊದಲಿನ ಪುಸ್ತಕವೊಂದರ ಆರಂಭದಲ್ಲಿ ಒಂದು ವಿನೋದದ ಸಂಗತಿ ಇದ್ದು, ಅದು ಹೆಚ್ಚುಕಡಿಮೆ ಈ ರೀತಿಯಲ್ಲಿದೆ: ಒಬ್ಬ ಯುವಕ ಮುಂದೆ ತನ್ನ ಜೀವನದಲ್ಲಿ ತಾನೇನು ಮಾಡಬೇಕೆಂದು ತೀರ್ಮಾನಕ್ಕೆ ಬರಲು ಪ್ರಯತ್ನಿಸುತ್ತಿದ್ದಾನೋ ಅದನ್ನು ತನ್ನ ತಾಯಿಯ ಮುಂದೆ ಹೀಗೆ ಹೇಳಿಕೊಳ್ಳುತ್ತಾನೆ "ಅಮ್ಮಾ, ಮುಂದೆ ನಾನು ಫಿಲಾಸಫಿಯ ಡಾಕ್ಟರಾಗಲು ಬಯಸುತ್ತೇನೆ". ಇದನ್ನು ಕೇಳಿ ರೋಮಾಂಚನಗೊಂಡ ತಾಯಿ "ಅದ್ಭುತ! ಆದರೆ ಫಿಲಾಸಫಿ ಎಂದರೆ ಯಾವ ರೀತಿಯ ಕಾಯಿಲೆ?" ಎಂದು ಕೇಳುತ್ತಾಳೆ.

ಈ ಹಾಸ್ಯಮಯ ಸಂಗತಿಯು ಪಿಂಕರ್‌ನ 'ದಿ ಬ್ಲಾಂಕ್ ಸ್ಲೇಟ್': ದಿ ಮಾಡರ್ನ್ ಡಿನೈಯಲ್ ಆಫ್ ಹ್ಯೂಮನ್ ನೇಚರ್' ಪುಸ್ತಕದ ಪ್ರಾರಂಭದಲ್ಲಿ ಬರುತ್ತದೆ. ಇದುವರೆಗೆ ನಿರಂತರವಾಗಿ ತತ್ವಶಾಸ್ತ್ರಗಳನ್ನು ವಿರೋಧಿಸುತ್ತ ಬಂದಿರುವ ಪಿಂಕರ್ ಬಹುಶಃ ಈ ಮೂಲಕ ಅದಕ್ಕೆ ಒಂದು ಬಲವಾದ ಹೊಡೆತ ಕೊಡುತ್ತಾನೆ. ಪಿಂಕರ್‌ನ ಪುಸ್ತಕಗಳನ್ನು ಓದಿರುವವರು ಯಾರೂ ಪಿಂಕರ್ ತತ್ವಶಾಸ್ತ್ರದ ಕಾಯಿಲೆಯಿಂದ ಬಳಲುತ್ತಿದ್ದಾನೆ ಎಂದು ಆರೋಪಿಸಲು ಹೋಗುವುದಿಲ್ಲ. "ವಿಜ್ಞಾನ" ಎನ್ನುವುದೇ ಆತನಿಗೆ ಪ್ರೇರೇಪಣೆ ನೀಡುವ ಮಾರ್ಗದರ್ಶಿ ತತ್ವವಾಗಿದೆ. ಎಂಐಟಿಯಲ್ಲಿ ಮಿದುಳು ಮತ್ತು ಸಂಜ್ಞಾನ ವಿಜ್ಞಾನ ವಿಭಾಗದಲ್ಲಿ ಕಲಿಸುತ್ತಿದ್ದ ಮತ್ತು ಪ್ರಸ್ತುತ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಮನೋವಿಜ್ಞಾನದ ಪ್ರಾಧ್ಯಾಪಕನಾಗಿರುವ ಪಿಂಕರ್, ಅನ್ವೇಷಣೆ ಮಾಡುತ್ತ ಇರಲು ಬಯಸುವ ತತ್ವಜ್ಞಾನಿಯಾಗಿರುವುದಕ್ಕಿಂತ ಹೆಚ್ಚಾಗಿ ಸಾಬೀತುಪಡಿಸಲು ಬಯಸುವ "ವಿಜ್ಞಾನಿ" ಆಗಿದ್ದಾನೆ.

ಪಿಂಕರ್‌ನ ಪ್ರಕಾರ ಜಗತ್ತಿನಲ್ಲಿ, ಮುಖ್ಯ ಖಳನಾಯಕನೆಂದರೆ 'ಬ್ಲಾಂಕ್ ಸ್ಲೇಟ್", (ಅನುಭವವಾದ). ಆತ ಹೇಳುವಂತೆ, "ಈ ಅನುಭವವಾದಿ ಸಿದ್ಧಾಂತವು ಆಧುನಿಕ ಬೌದ್ಧಿಕ ಜಗತ್ತಿನಲ್ಲಿ ಪವಿತ್ರ ಸ್ಥಾನಮಾನವನ್ನು ಪಡೆದುಕೊಂಡಿರುವ ಇತರ ಎರಡು ಸಿದ್ಧಾಂತಗಳ ಜೊತೆಗೂಡಿಕೊಂಡಿರುತ್ತದೆ. ಆ ಎರಡು ಸಿದ್ಧಾಂತಗಳೆಂದರೆ, 'ನೋಬಲ್ ಸ್ಯಾವೇಜ್' ಅಂದರೆ ಮಾನವತೆಯ ಜನ್ಮಜಾತ ಒಳ್ಳೆಯತನ (ರೂಸ್ಸೋ ತನ್ನ ರಮ್ಯವಾದ ಪರಿಕಲ್ಪನೆಯಲ್ಲಿ ಪ್ರತಿಪಾದಿಸುವಂತೆ ಮಾನವರು ಹುಟ್ಟುತ್ತಲೇ ಒಳ್ಳೆಯವರಾಗಿರುತ್ತಾರೆ ಆದರೆ ಸಾಮಾಜಿಕ ಸನ್ನಿವೇಶಗಳು ಅವರನ್ನು ಕೆಟ್ಟವರನ್ನಾಗಿಸುತ್ತವೆ) ಮತ್ತೊಂದು 'ಘೋಸ್ಟ್ ಇನ್ ದಿ ಮಶೀನ್' ಅಂದರೆ (ಕಾರ್ಟೇಸಿಯನ್ ದ್ವಂದ್ವತೆ - ಮನಸ್ಸು ಮತ್ತು ದೇಹವು ಎರಡು ಪ್ರತ್ಯೇಕ ಘಟಕಗಳಾಗಿವೆ, ಮಾನವ ಪ್ರಜ್ಞೆ ಮತ್ತು ಹಾಗೂ ಭೌತಿಕ ಶರೀರ ಎರಡು ಬೇರೆ ಪ್ರತ್ಯೇಕ ಘಟಕಗಳಾಗಿವೆ ಎಂಬ ಚಿಂತನೆ). ಈ ಮೂರರ ಒಟ್ಟಾಗುವಿಕೆಯು ಪಿಂಕರ್ ಪ್ರಕಾರ, ನಾವು ಈ ಪ್ರಕಾರವಾಗಿ ನಮ್ಮನ್ನು ಅರ್ಥ ಮಾಡಿಕೊಂಡಿರುವ ರೀತಿಯಲ್ಲೇ ವಿನಾಶಕಾರಿ ಪರಿಣಾಮಗಳಿವೆ, ಅದರಿಂದಾಗಿ, ಅದು ಶಿಕ್ಷಣ, ಸಾಮಾಜಿಕ ನೀತಿ ಮತ್ತು ರಾಜಕೀಯದ ಮೇಲೆ ಹಾನಿಕಾರಕ ಪರಿಣಾಮಗಳನ್ನು ಬೀರಿದೆ.

ಪಿಂಕರ್‌ನ ಮಾರ್ಗವೆಂದರೆ, ಮಾನವ ಸ್ವಭಾವವನ್ನು "ವೈಜ್ಞಾನಿಕ"ವಾಗಿ ಅರ್ಥಮಾಡಿಕೊಳ್ಳುವುದು. ಪಿಂಕರ್ ಹೇಳುವಂತೆ "ಮಾನವ ಸ್ವಭಾವವು ಒಂದು ವೈಜ್ಞಾನಿಕ ವಿಚಾರವಾಗಿದ್ದು, ಹೊಸ ಹೊಸ ಸಂಗತಿಗಳು ಹೊರಹೊಮ್ಮುವುದರೊಂದಿಗೆ ಅವುಗಳ ಕುರಿತ ನಮ್ಮ ಪರಿಕಲ್ಪನೆಗಳು ಬದಲಾಗುತ್ತ ಹೋಗುತ್ತವೆ". ಆದ್ದರಿಂದ ತನ್ನ ಪುಸ್ತಕಗಳಲ್ಲಿ ಒಂದರ ನಂತರ ಮತ್ತೊಂದರಲ್ಲಿ ಪಾಶ್ಚಾತ್ಯ ತತ್ವಶಾಸ್ತ್ರವು ತೆಗೆದುಕೊಂಡ ತಿರುವುಗಳಲ್ಲಿ ತನಗೆ ಸರಿಕಾಣದವುಗಳನ್ನು ಪಿಂಕರ್ ಕೆಡವುತ್ತಾ ಹೋಗುತ್ತಾನೆ ಮತ್ತೆ ಅದೇ ಜಾಗದಲ್ಲಿ ಮಾನವ ಸ್ವಭಾವದ ಸರಿಯಾದ, ವೈಜ್ಞಾನಿಕ ತಿಳುವಳಿಕೆಯನ್ನು ಸ್ಥಾಪಿಸುತ್ತಾನೆ.

ಪಿಂಕರ್‌ಗಿರುವ ಮೂಲಭೂತ ಸಮಸ್ಯೆಯೆಂದರೆ, ಭಾಷಾ ವಿಜ್ಞಾನಿ ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿತ್ವದ ಹರಿತ ವಿಮರ್ಶಕನಾದ ನೋಮ್ ಚಾಮ್ಸ್ಕಿ ಜೊತೆ ಆತ ಹಂಚಿಕೊಂಡಿರುವಂತೆ ಸಹಜತಾವಾದದ ವಿರೋಧಿಗಳಲ್ಲಿ ಒಂದು ಕಾಲದಲ್ಲಿ ಚಾಲ್ತಿಯಲ್ಲಿದ್ದ ಸೊಗಸುಗಾರಿಕೆಯ ಪದಬಳಕೆ. ತಮ್ಮ 'ಲ್ಯಾಂಗ್ವೇಜ್ ಅಂಡ್ ರೆಸ್ಪಾನ್ಸಿಬಿಲಿಟಿ' ಯಲ್ಲಿ ನೋಮ್ ಚಾಮ್ಸ್ಕಿ ಹೇಳುತ್ತಾರೆ

...ಸಾಮಾಜಿಕ ಬದಲಾವಣೆಯ ಪ್ರತಿಪಾದಕರು “ಮಾನವ ಸ್ವಭಾವ” ಎಂಬುದು ಒಂದು ಮಿಥ್ಯೆ, ಅದು ಇತಿಹಾಸದ ಉತ್ಪನ್ನವಲ್ಲದೆ ಬೇರೇನೂ ಅಲ್ಲ ಎಂಬ ತೀವ್ರ ನಿಲುವನ್ನು ಅಳವಡಿಸಿಕೊಳ್ಳುವುದು ಸಹಜ. ಆದರೆ ಆ ನಿಲುವು ಸರಿಯಾದುದಲ್ಲ. ಮಾನವ ಸ್ವಭಾವವೆನ್ನುವುದು ಅಸ್ತಿತ್ವದಲ್ಲಿದೆ, ಮಾನವ ಪ್ರಭೇದಗಳಲ್ಲಿ ಜೈವಿಕ ಬದಲಾವಣೆಗಳಾಗದ ಹೊರತು ಅದು ಬದಲಾಗದು.

ಮತ್ತು, ಚೋಮ್ಸ್ಕಿ ಮಾರ್ಕ್ಸ್‌ವಾದಿ ಆಂಟೋನಿಯೋ ಗ್ರಾಮ್ಸ್ಕಿಯ ಕುರಿತ ಟೀಕೆಯಲ್ಲಿ ಹೇಳುವಂತೆ, ಮಾನವ ಸ್ವಭಾವವು “ಐತಿಹಾಸಿಕವಾಗಿ ನಿರ್ಧರಿಸ್ಪಟ್ಟ ಸಾಮಾಜಿಕ ಸಂಬಂಧಗಳ ಸಂಪೂರ್ಣತೆ” ಎಂದು ಹೇಳುವುದಕ್ಕೆ ಯಾವುದೇ “ಪುರಾವೆ” ಇಲ್ಲ. ಅಂತಹ ಹೇಳಿಕೆಗಳು ಚೋಮ್ಸ್ಕಿ ಮತ್ತು ಪಿಂಕರ್ ಪ್ರಕಾರ “ಅಸತ್ಯ”.

ಆದ್ದರಿಂದ ಪಿಂಕರ್ ಮತ್ತು ಚೋಮ್ಸ್ಕಿ ಇವರಿಬ್ಬರ ಪ್ರಕಾರ ಭಾಷೆಯ ಅಧ್ಯಯನವು ಕೇವಲ ತಾರ್ಕಿಕ ನಿಯಮಗಳ ಅಧ್ಯಯನವಲ್ಲ. ಬದಲಾಗಿ ಮೂಲಭೂತವಾಗಿ ಸಂಜ್ಞಾನಶಾಸ್ತ್ರದ ಅಗತ್ಯತೆಯ ಅಧ್ಯಯನವಾಗಿದೆ. ಚೋಮ್ಸ್ಕಿ ಹೇಳುತ್ತಾರೆ, “ಭಾಷಾವಿಜ್ಞಾನವು ಜ್ಞಾನದ ಮನೋವೈಜ್ಞಾನಿಕತೆಯ ಒಂದು ಭಾಗವಾಗಿದೆ ...” ಮತ್ತು “ಭಾಷಾವಿಜ್ಞಾನಿ, ಪ್ರಾಯೋಗಿಕ ಮನೋವಿಜ್ಞಾನಿ ಮತ್ತು ನರವಿಜ್ಞಾನಿ ಮೂವರು ಮನಸ್ಸಿನ ಅರಿವಿನ ರಚನೆಯನ್ನು ಬಿಡಿಸಿ ನೋಡುವ”, ಮತ್ತು ಅದನ್ನು ತಿಳಿಸಿಕೊಡುವಂತಹ “ಜೈವಿಕವಾಗಿ ನಿರ್ಧರಿಸಲಾದ ಒಂದು ಆದ್ಯತೆಯ ವ್ಯವಸ್ಥೆಯನ್ನು ಅನ್ವೇಷಿಸುವ ಒಂದೇ ಬಗೆಯ ಕ್ರಿಯೆಯಲ್ಲಿ ತೊಡಗಿಸಿಕೊಂಡಿರುತ್ತಾರೆ”. ಈ ದೃಷ್ಟಿಕೋನದಂತೆ, ಭಾಷೆ ಮತ್ತು ಮನಸ್ಸಿನ ನಡುವಿನ ಸಂಬಂಧದ ಅಧ್ಯಯನದ ಮೂಲಕ, ಪಿಂಕರ್ “ನಮ್ಮ ಅನುಭವದ ಮೂಲಸಂರಚನೆ” ಎಂದು ಯಾವುದನ್ನು ಗುರುತಿಸುತ್ತಾನೋ ಅದನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸುತ್ತೇವೆ.

ಈ ಅರ್ಥದಲ್ಲಿಯೇ ಚೋಮ್ಸ್ಕಿಗೆ ಭಾಷೆ “ಮನಸ್ಸಿನ ಕನ್ನಡಿ” ಯಾಗಿಯೂ ಪಿಂಕರ್‌ಗೆ “ಮಾನವ ಸ್ವಭಾವದ ಕಿಟಕಿ” ಯೂ ಆಗಿದೆ. ಭಾಷಿಕ ನಿಯಮಗಳು ಮತ್ತು ವಿಭಾಗಗಳಲ್ಲಿ ಪ್ರತಿಬಿಂಬಿತವಾಗಿರುವ ನಮ್ಮ ಜನ್ಮಜಾತ ಅರಿವಿನ ಕಾರ್ಯವಿಧಾನಗಳ ವ್ಯಾಕರಣದ ತಿಳಿವಳಿಕೆಯು ಸರಿಯಾದ ತಿಳುವಳಿಕೆಯ ಸರಪಳಿಗೆ ಕಾರಣವಾಗುತ್ತದೆ: ವೈಜ್ಞಾನಿಕವಾದ ಮತ್ತು ಅದರಿಂದ ಉಂಟಾಗುವ ಜ್ಞಾನದ ಸರಿಯಾದ ತಿಳಿವಳಿಕೆಯು ಹೇಗೆ ನಮ್ಮ ಮನಸ್ಸು ಕೆಲಸ ಮಾಡುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಕಾರಣವಾಗುತ್ತದೆ, ನಮ್ಮ ಮನಸ್ಸು ಹೇಗೆ ಕೆಲಸ ಮಾಡುತ್ತದೆ ಎನ್ನುವುದರ ಸರಿಯಾದ ತಿಳಿವಳಿಕೆಯು

ಮಾನವರ ಸ್ವಭಾವವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ನೆರವಾಗುತ್ತದೆ, ಮಾನವರ ಸ್ವಭಾವವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದರಿಂದ ಮಾನವರ ಅಗತ್ಯಗಳೇನು ಎನ್ನುವುದನ್ನು ಸರಿಯಾಗಿ ಅರಿಯಲು ನೆರವಾಗುತ್ತದೆ, ಮಾನವರ ಅಗತ್ಯಗಳೇನು ಎನ್ನುವುದನ್ನು ಸರಿಯಾಗಿ ಅರಿಯುವುದರಿಂದ ನಮ್ಮ ಸಮಸ್ಯೆಗಳನ್ನು ಪರಿಹರಿಸಲು ತೆಗೆದುಕೊಳ್ಳಬೇಕಾದ ಸರಿಯಾದ ಕ್ರಮಗಳಿಗೆ ಕಾರಣವಾಗುತ್ತದೆ...

ಇವೆಲ್ಲ ಚಿಂತನೆ ಆಲೋಚನೆಗಳು ಸಾಮಾನ್ಯವಾಗಿ ಪಿಂಕರ್‌ನ ಒಟ್ಟು ಕೃತಿಗಳಲ್ಲಿವೆ ಮತ್ತು ನಿರ್ದಿಷ್ಟವಾಗಿ 'ದಿ ಸ್ಟಫ್ ಆಫ್ ಥಾಟ್' ಕೃತಿಯು ತಿಳಿಸುವ ಮುಖ್ಯ ವಿಚಾರಗಳಾಗಿವೆ. ಸುಮಾರು ಐದು ನೂರು ಪುಟಗಳನ್ನು ಒಂಭತ್ತು ಅಧ್ಯಾಯಗಳಾಗಿ ವಿಂಗಡಿಸಲಾಗಿದ್ದು, 'ದಿ ಸ್ಟಫ್ ಆಫ್ ಥಾಟ್' ಈ ಅಲೋಚನೆಗಳ ಒಟ್ಟಾರೆ ಪರಿಣಾಮಗಳ ಕುರಿತು ವಿಚಾರ ಮಾಡುತ್ತದೆ. ಈ ಕೃತಿಯ ಕೊನೆಯ ಅಧ್ಯಾಯವಾದ 'ಎಸ್ಕೇಪಿಂಗ್ ದ ಕೇವ್' ಮಾನವ ಸ್ವಭಾವವು ಭಾಷೆಯಲ್ಲಿ ಹೇಗೆ ಪ್ರತಿಫಲಿಸುತ್ತದೆ ಎಂಬುದನ್ನು ನೋಡುವ "ದಾಸ್ತಾನು ವಿವರಗಳ ಪಟ್ಟಿ" ಯ ಹಾಗೆ ಪಿಂಕರ್‌ನ ಪ್ರಯತ್ನವನ್ನು ಸಂಕ್ಷಿಪ್ತಗೊಳಿಸುತ್ತದೆ. ಪಿಂಕರ್ ಹೀಗೆ ಬರೆಯುತ್ತಾನೆ:

ಇವೆಲ್ಲವೂ ವೈಜ್ಞಾನಿಕವಾಗಿ ಸಾಕ್ಷರವಾಗಿರುವ ಪ್ರಜಾಪ್ರಭುತ್ವದಲ್ಲಿ ಶಿಕ್ಷಣಕ್ಕಿರುವ ಸ್ಥಾನವನ್ನು ಒತ್ತಿಹೇಳುತ್ತವೆ... ಶಿಕ್ಷಣದ ಗುರಿಯು ಭೌತಿಕ ಮತ್ತು ಸಾಮಾಜಿಕ ಜಗತ್ತಿನ ಕುರಿತು ನಮಗೆ ಸಹಜ ಪ್ರವೃತ್ತಿಯ ಚಿಂತನೆಯ ವಿಧಾನಗಳಲ್ಲಿರುವ ನ್ಯೂನತೆಗಳನ್ನು ಸರಿದೂಗಿಸುವುದು. ಮತ್ತು, ಶಿಕ್ಷಣವು ಸಫಲವಾಗುವುದು ಖಾಲಿ ಮನಸ್ಸಿನಲ್ಲಿ ಅಮೂರ್ತ ಹೇಳಿಕೆಗಳನ್ನು ಅಳವಡಿಸಲು ಪ್ರಯತ್ನಿಸುವ ಮೂಲಕ ಅಲ್ಲ, ಆದರೆ ನಮ್ಮ ಪ್ರಮಾಣಿತ ಸಾಧನವಾದ ಮಾನಸಿಕ ಮಾದರಿಗಳನ್ನು ಗಣನೆಗೆ ತೆಗೆದುಕೊಳ್ಳುವ ಮೂಲಕ ಮತ್ತು ಆಯ್ದ ಸಾದೃಶ್ಯಗಳಲ್ಲಿ ಹೊಸ ವಿಷಯಗಳಿಗೆ ಅನ್ವಯಿಸುವ ಮೂಲಕ ಮತ್ತು ಅವುಗಳನ್ನು ಹೊಸ ಮತ್ತು ಹೆಚ್ಚು ಅತ್ಯಾಧುನಿಕ ಸಂಯೋಜನೆಗಳಲ್ಲಿ ಜೋಡಿಸುವ ಮೂಲಕ.

ಪಿಂಕರ್ ಪ್ರಕಾರ, ಒಂದು ಜೀವಿ ಪ್ರಭೇದವಾಗಿ ಮಾನವರೆಂದು ಕರೆಸಿಕೊಂಡಿರುವ ನಾವು ಸಹಜವಾಗಿ ಪಡೆದಿರುವ, ನಮಗೆಲ್ಲರಿಗು ಒಂದೇ ಬಗೆಯಲ್ಲಿ ಬಂದಿರುವ ಜನ್ಮಜಾತ ಮಾನಸಿಕ ಮಾದರಿಗಳನ್ನು ಒಪ್ಪಿ ಅಂಗೀಕರಿಸಿಕೊಂಡಾಗ ಮತ್ತು ಅರ್ಥಮಾಡಿಕೊಂಡಾಗ ಮಾತ್ರ ಶಿಕ್ಷಣವು ಯಶಸ್ವಿಯಾಗುತ್ತದೆ. ಮಾನವರ ಮನಸ್ಸಿನ ಸ್ವಭಾವದ ಅನುಭವವಾದಿ ತಿಳುವಳಿಕೆಯು ತಪ್ಪಾಗಿದೆ, ಏಕೆಂದರೆ, ಮನಸ್ಸು

ತನ್ನ ಮೂಲಸ್ವರೂಪದಲ್ಲಿ ಖಾಲಿ ಇರುವುದರಿಂದ ಸಹಜವಾಗಿ ಸ್ವಾಧೀನಪಡಿಸಿಕೊಳ್ಳುವ ಕುಶಲತೆಯನ್ನು ಕಲಿಯುತ್ತದೆ ಮತ್ತು ತನ್ನ ಬಲವಾದ ಆಗ್ರಹಕ್ಕೆ ತಕ್ಕಂತೆ ರೂಪುಪಡೆಯುತ್ತದೆ. ಮನಸ್ಸಿನ ಅನುಭವವಾದಿ ತಿಳುವಳಿಕೆಯು ಅಧಿಕಾರದ ನಿರಂಕುಶ ದುರುಪಯೋಗಕ್ಕೆ ("ದುರಾಲೋಚನೆಯ ಸಾಮಾಜಿಕ ಕಾರ್ಯಸಾಧನೆ" ಎಂದು ಪಿಂಕರ್ ಇದನ್ನು ಕರೆಯುತ್ತಾನೆ) ಮತ್ತು ಸ್ವಾತಂತ್ರ್ಯಹರಣಕ್ಕೆ ಕಾರಣವಾಗುತ್ತದೆ. ಅಂತಿಮವಾಗಿ ಭಾಷೆ ಎಂದರೆ ಏನು ಎಂಬ ನಮ್ಮ ಈ ತಿಳುವಳಿಕೆಯಲ್ಲಿನ ಅಪಾಯ ಏನೆಂದರೆ, ಅದು ನ್ಯಾಯಯುತವಾದ, ಸಮಾನ ಮತ್ತು ಮಾನವೀಯ ಸಮಾಜ ಎಂದರೆ ಏನೆಂದು ನಿಖರವಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಇರುವ ತಿಳುವಳಿಕೆಯ ಕೊರತೆ ಏನಿದೆಯೋ ಅದಕ್ಕೆ ಕಡಿಮೆಯಿಲ್ಲದಂತೆ ಭಾಷೆಯ ಕುರಿತ ನಮ್ಮ ತಿಳಿವಳಿಕೆಯೂ ಇದೆ.

ಕೊನೆಯದಾಗಿ ಒಂದು ಮಾತು, ಈ ಚರ್ಚೆಯು ಇಲ್ಲಿನ ವಿಮರ್ಶೆಯ ವ್ಯಾಪ್ತಿಯನ್ನು ಮೀರಿದ್ದರೂ, ಅನುಭವವಾದಿ ಸಿದ್ಧಾಂತದಲ್ಲಿ ಅನೇಕ ಜನ ಪಾಶ್ಚಿಮಾತ್ಯ ಚಿಂತಕರನ್ನು ತೊಂದರೆಗೆ ಒಳಪಡಿಸಿರುವ ಸಂಗತಿ ಯಾವುದು? ಪ್ರಾಚೀನ ಗ್ರೀಸ್‌ನಿಂದ ಮೊದಲುಗೊಂಡು, ಮುಖ್ಯವಾಹಿನಿ ಪಾಶ್ಚಿಮಾತ್ಯ ಚಿಂತನೆಯಲ್ಲಿ ವೈಚಾರಿಕತೆ ಮತ್ತು ಅನುಭವವಾದದ ನಡುವಿನ ವೈರುಧ್ಯದ ಈ ಶಾಶ್ವತ ಪುನರಾವರ್ತನೆ ಏಕೆ? ಮತ್ತು ಜ್ಞಾನದ ಏಣಿಶ್ರೇಣಿಯಲ್ಲಿ ವಿಜ್ಞಾನವು ಅಂತಹ ವಿಶೇಷ ಸ್ಥಾನವನ್ನು ಗಳಿಸಿಕೊಂಡಿರುವುದು ಏಕೆ? ಈ ಅರ್ಥದಲ್ಲಿ ನೋಡಿದಾಗ, ಪಿಂಕರ್ ಸಂಪೂರ್ಣವಾಗಿ ಮುಖ್ಯವಾಹಿನಿಯ ಪಾಶ್ಚಿಮಾತ್ಯ ಚಿಂತನೆಯ ವ್ಯಾಕರಣದ ಒಳಗಿನಿಂದ ಕೆಲಸ ಮಾಡುತ್ತಾನೆ; ಆತ ಯಾವುದೇ ನಿರ್ಣಯಗಳನ್ನು ಮುಂದಿಡುವುದಿಲ್ಲವಾದರೂ ಆ ರೀತಿಯ ಎಲ್ಲ ಲಕ್ಷಣಗಳನ್ನು ತೋರಿಸುತ್ತಾನೆ.

***